**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ಸಿ.ಸಿ. ಸಂಖ್ಯೆ:3860/2025 (ಪಿ.ಡಬ್ಲ್ಯೂ– 1)**

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 11.06.2026.

**ಪಾಟೀ ಸವಾಲು : ಶ್ರೀ . ಎಸ್.ಪಿ.ಯು. ವಕೀಲರಿಂದ, ಆರೋಪಿ ಪರವಾಗಿ**

ನಾನು ಬಿ.ಕಾಂ ವ್ಯಾಸಾಂಗ ಮಾಡಿದ್ದೇನೆ. ನಾನು ವ್ಯವಸಾಯ ಜೊತೆಗೆ ಸರ್ಕಾರಿ ನ್ಯಾಯಬೆಲೆ ಅಂಗಡಿಯನ್ನು ಏಜೆನ್ಸಿ ಮೂಲಕ ನಡೆಸುತ್ತಿದ್ದೇನೆ. ನಾನು ಸದರಿ ಅಂಗಡಿ ಮೂಲಕ ಕಮಿಷನ್ ಪಡೆಯುತ್ತೇನೆ. ಸುಮಾರು ಮಾಸಿಕ 20 ಸಾವಿರ ಕಮಿಷನ್ ಪಡೆಯುತ್ತೇನೆ. ಎಸ್.ಮಾದಾಪುರ ಸ.ನಂ.78/2 ವಿಸ್ತೀರ್ಣ 0.20 ಗುಂಟೆ ನನ್ನ ಹೆಸರಿನಲ್ಲಿದೆ. ಪಹಣಿಯನ್ನು ಹಾಜರುಪಡಿಸಿಲ್ಲ. ಪಹಣಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಸ್ವತ್ತಿನಲ್ಲಿ ಸುಮಾರು 50 ತೆಂಗಿನ ಮರಗಳನ್ನು ಬೆಳೆಸಿದ್ದೇನೆ. ಸದರಿ ಜಮೀನಿಂದ ನನಗೆ ವಾರ್ಷಿಕ 20 ಸಾವಿರ ಆದಾಯ ಇದೆ.

ಆರೋಪಿ ಮತ್ತು ನನ್ನ ವಾಸದ ಜಿಲ್ಲೆಗಳು ಬೇರೆ ಬೇರೆ ಎಂದರೆ ಸರಿ. ಬಿ.ಪಿ.ಎಲ್ ಪಡಿತರ ಚೀಟಿಯಲ್ಲಿ ನಾನು ಮತ್ತು ನನ್ನ ಹೆಂಡತಿ ಸದಸ್ಯರಾಗಿದ್ದೇವೆ. ಬಿ.ಪಿ.ಎಲ್ ಪಡಿತರ ಚೀಟಿಯನ್ನು ಸುಮಾರು 30 ವರ್ಷಗಳಿಂದ ಹೊಂದಿದ್ದೇವೆ.

ದೂರು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆರೋಪಿ ಮತ್ತು ನನ್ನ ನಡುವೆ ನಿರ್ಧಿಷ್ಟ ದಿನಾಂಕದಂದು ವ್ಯವಹಾರ ನಡೆದಿಲ್ಲವೆಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ–1 ಚೆಕ್ಕನ್ನು ಆರೋಪಿಯು ಯಾವ ದಿನಾಂಕದಂದು ನೀಡಿದ್ದಾರೆ ಎಂದು

ದೂರು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಿಃ 16.09.2020 ರಂದು ನಾನು ಆರೋಪಿಗೆ ವಕೀಲರ ಮೂಲಕ ನೋಟಿಸು ನೀಡಿದ್ದೇನೆ. ಆರೋಪಿಗೆ ಸದರಿ ನೋಟಿಸು ಜಾರಿಯಾಗಿರುವ ಬಗ್ಗೆ ಸ್ವೀಕೃತಿ ಹಾಜರುಪಡಿಸಿದ್ದೇನೆ. ನಿಪಿ–5 ಅಂಚೆ ಸ್ವೀಕೃತಿ ಮತ್ತು ನಿಪಿ–1(ಎ) ಸಹಿ ಬೇರೆ ಬೇರೆ ಎಂದರೆ ಸರಿ. ಅಲ್ಲದೆ ಹೆಸರುಗಳು ಸಹ ಬೇರೆ ಬೇರ ಎಂದರೆ ಸರಿ. ಆರೋಪಿಗೆ ನೋಟಿಸು ಖುದ್ದು ಜಾರಿಯಾಗಿಲ್ಲ ಎಂದರೆ ಸಾಕ್ಷಿಯು ನೋಟಿಸನ್ನು ಆರೋಪಿಗೆ ನೀಡಿದಾಗ, ಆರೋಪಿಯು ಮನೆಯಲ್ಲಿ ಇಲ್ಲದ ಕಾರಣ ಪಕ್ಕದ ಮನೆಯವರಿಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸನ್ನು ಆ ರೀತಿ ಯಾರು ಸ್ವೀಕಾರ ಮಾಡಿದ್ದಾರೆಂದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ನೋಟಿಸನ್ನು ಆರೋಪಿಯ ಪಕ್ಕದ ಮನೆಯವರು ಪಡೆದಿದ್ದಾರೆ ಎನ್ನುವುದು ನನಗೆ ಅಂಚೆ ಸ್ವೀಕೃತಿ ವಾಪಸ್ಸು ಬಂದಾಗ ತಿಳಿಯಿತು. ನಾನು ಆರೋಪಿಗೆ ಆ ರೀತಿ ಅಂಚೆ ಸ್ವೀಕೃತಿ ಪಡೆದ ನಂತರ 2 ನೇ ಬಾರಿ ನೋಟಿಸನ್ನು ನನ್ನ ವಕೀಲರ ಮೂಲಕ ಕಳುಹಿಸಿಲ್ಲ.

2025 ರ ಫೆಬ್ರವರಿ ಮಾಹೆಯಲ್ಲಿ ನಾನು ಆರೋಪಿಗೆ ರೂ.10 ಲಕ್ಷ ಹಣ ನೀಡಿದ್ದೆ ಎಂದು ತಿಳಿಸಿದ್ದು, 2025 ರ ಫೆಬ್ರವರಿ ಅಥವಾ ಆ ಪೂರ್ವದಲ್ಲಿ ನನ್ನ ಬಳಿ 10 ಲಕ್ಷ ಹಣವಿರಲಿಲ್ಲ ಎಂದರೆ ನನ್ನ ಬ್ಯಾಂಕಿನ ಖಾತೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ 10 ಲಕ್ಷ ಹಣ ನೀಡುವಾಗ ಸಾಕ್ಷಿದಾರರು ಇದ್ದರು.

**ಮುಂದುವರೆದ ಪಾಟೀ ಸವಾಲುಃ–** ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ
Sd/- 11.06.26
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.